# ನಾರಾಯಣನಿಗೆ ಕನ್ನಡವೇ ಊರುಗೋಲು



■ ನಿರೂಪಣೆ: **ಶಶಿಕುಮಾರ್ ಸಿ.**

**ಮೈಸೂರಿನ ಸೋಮೇಶ್ವರಪುರದ ಎಸ್‌ಆರ್ ನಾರಾಯಣ ಒಂದು ದುರ್ಘಟನೆಯಲ್ಲಿ ಗಾಯಗೊಂಡ ನತದೃಷ್ಟ. ಗೂಡಂಗಡಿ ನಡೆಸುತ್ತಿರುವ ಅವರು ಅಂಗಡಿ ಮತ್ತು ಮನೆಯನ್ನು ಪುಟ್ಟ ಗ್ರಂಥಾಲಯ ಮಾಡಿಕೊಂಡು, ಓದುವ ಸಂಸ್ಕೃತಿ ಬೆಳೆಸುತ್ತಿದ್ದಾರೆ. ಸಾಹಿತ್ಯಪ್ರೀತಿಯನ್ನೇ ಜೀವನದ್ರವ್ಯ ಆಗಿಸಿಕೊಂಡಿರುವ ಅವರು ಸಹೃದಯರ ನೆರವಿನ ನಿರೀಕ್ಷೆಯಲ್ಲಿದ್ದಾರೆ. ಅವರ ಬದುಕಿನ ಕಥೆಯನ್ನು ಅವರ ಮಾತುಗಳಲ್ಲೇ ಕೇಳಿ.**

ಬಡತನದ ಜೊತೆ ಏಗುತ್ತಲೇ ದ್ವಿತೀಯ ಪಿಯುಸಿ ಮುಗಿಸಿದೆ. ಆನಂತರ, ಕುಟುಂಬದ ಜವಾಬ್ದಾರಿ ಹೊರುವ ಸಲುವಾಗಿ ಕಾಲೇಜಿಗೆ ಬೆನ್ನು ಹಾಕಬೇಕಾಯಿತು. ಅನ್ನ ಹುಡುಕುತ್ತ ನಿರ್ಮಾಣ ಹಂತದ ಕಾಮಗಾರಿಗಳಲ್ಲಿ ಕಬ್ಬಿಣದ ಬಾರ್ ಬೆಂಡಿಂಗ್ ಕೂಲಿ ಮಾಡಿಕೊಂಡು ತುತ್ತಿನ ಚೀಲ ತುಂಬಿಸಿಕೊಳ್ಳುತ್ತಿದ್ದೆ.

ಒಮ್ಮೆ ಮಡಿಕೇರಿಯ ಸುಂಟಿಕೊಪ್ಪ ಸಮೀಪದ ಗರಗಂದೂರು ಬಳಿ ಮೊರಾರ್ಜಿ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದೆ. ಆ ಕಟ್ಟಡದ ಸೆಂಟ್ರಿಂಗ್‌ಗೆ ಹಾಕಿದ್ದ ಕಬ್ಬಿಣದ ಜಾಕ್ ರಾಡ್ ಸಡಿಲಗೊಂಡು, ಸೆಂಟ್ರಿಂಗ್ ಸಮೇತ ಕುಸಿದು ಬಿದ್ದೆ. ಆ ಘಟನೆಯಲ್ಲಿ ಬೆನ್ನುಹುರಿಗೆ ತೀವ್ರ ಹಾನಿಯಾಯಿತು. ಸೊಂಟದಿಂದ ಕೆಳಗೆ ಸ್ಪರ್ಶ ಕಳೆದುಕೊಂಡೆ. ಬೆನ್ನುಹುರಿ ಸಮಸ್ಯೆಯ ಜೊತೆಗೆ ನಾನಾ ರೀತಿಯ ಆರೋಗ್ಯ ಸಮಸ್ಯೆಗಳಿಗೆ ಸಿಲುಕಿದೆ. ಮಲ ಮತ್ತು ಮೂತ್ರ ವಿಸರ್ಜನೆ ಮೇಲೆ ಹಿಡಿತ ಕಳೆದುಕೊಂಡೆ.

ನಾಲ್ಕೈದು ವರ್ಷಗಳ ಕಾಲ ಹಾಸಿಗೆಯಲ್ಲೇ ಇರುವಂತಾಯಿತು. ರಾಮನಗರದ ಬಳಿಯ ಫಿಸಿಯೊಥೆರಪಿ ಕೇಂದ್ರಕ್ಕೆ ಸ್ನೇಹಿತರೊಬ್ಬರು ಕರೆದುಕೊಂಡು ಹೋದರು. ಅಲ್ಲಿ ಒಂದು ವರ್ಷದವರೆಗೆ ಫಿಸಿಯೊಥೆರಪಿ ತೆಗೆದುಕೊಂಡೆ. ಅದರಿಂದ ಸ್ವಲ್ಪಮಟ್ಟಿಗೆ ಸ್ಪರ್ಶಜ್ಞಾನ ಹಿಂತಿರುಗಿತು. ಕ್ಯಾಲಿಫೋರ್ ಹಾಕಿಕೊಂಡು ನನ್ನಷ್ಟಕ್ಕೆ ನಾನು ಸ್ವಲ್ಪ ದೂರ ಓಡಾಡುವ ಶಕ್ತಿ ಬಂದಿದೆ. ಪೂರ್ಣ ಪ್ರಮಾಣದಲ್ಲಿ ಗುಣಮುಖವಾಗಲು ಹೆಚ್ಚಿನ ಚಿಕಿತ್ಸೆ ಅಗತ್ಯ ಎಂದಿದ್ದಾರೆ ವೈದ್ಯರು. ಅದಕ್ಕೆ ನನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಬದುಕಿಗಾಗಿ ಲೇಖನ ಸಾಮಗ್ರಿಗಳನ್ನು ಮಾರುವ ಸಣ್ಣ ಗೂಡಂಗಡಿಯನ್ನು ಊರಿನಲ್ಲಿ ಇಟ್ಟುಕೊಂಡಿದ್ದೇನೆ. ತಂದೆಯ ನೆರವಿನಿಂದ ವ್ಯಾಪಾರ ಸಾಗುತ್ತಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಕೊಂಚ ಮಟ್ಟಿಗೆ ಸಕ್ರಿಯವಾಗಿದ್ದೇನೆ. ಕಳೆದ ಎರಡು ವರ್ಷಗಳಿಂದ ಯಾರು ಯಾರು ಪುಸ್ತಕಗಳನ್ನು ಬರೆದಿದ್ದಾರೋ ಅವರ ಪೈಕಿ ಕೆಲವರ ಪುಸ್ತಕಗಳನ್ನು ಸಂಗ್ರಹಿಸಿದ್ದೇನೆ. ಹಳೆಯ ಪುಸ್ತಕ, ನಿಯತಕಾಲಿಕೆಗಳು, ಸ್ಫೂರ್ತಿದಾಯಕ ಕಥೆಗಳ ಕೃತಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪಠ್ಯ ಹಾಗೂ 5ರಿಂದ 10ನೇ ತರಗತಿಯವರೆಗಿನ ಪುಸ್ತಕಗಳು ನನ್ನ ಸಂಗ್ರಹದಲ್ಲಿವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧವಾಗುವ ಅಭ್ಯರ್ಥಿಗಳಿಗೆ ಅಗತ್ಯವೆಂದು ಇವುಗಳನ್ನು ಸಂಗ್ರಹಿಸಿದ್ದೇನೆ. ಈ ಪೈಕಿ ಕೆಲವನ್ನು ದಾನವಾಗಿ ಪಡೆದಿದ್ದು, ಇನ್ನೂ ಕೆಲವನ್ನು ಖರೀದಿಸಿರುವೆ.

ಬೆಂಗಳೂರಿನಲ್ಲಿರುವ 'ವೈಮಾನಿಕ ಸಮೀಕ್ಷಾ ಕೇಂದ್ರ'ದ 20 ವರ್ಷಗಳ ಕೃತಿಗಳನ್ನು ಸಂಗ್ರಹಿಸಿದ್ದೇನೆ. ಫೇಸ್‌ಬುಕ್‌ನಲ್ಲಿ ತಮ್ಮ ಕೃತಿಗಳ ಬಗ್ಗೆ ಪ್ರಚಾರ ಮಾಡುವ ಲೇಖಕರನ್ನು ಸಂಪರ್ಕಿಸಿ, ಪುಸ್ತಕಕ್ಕಾಗಿ ಮನವಿ ಮಾಡುವೆ. ಆ ಪುಸ್ತಕ ಓದಿ ಸಾಮಾಜಿಕ ಜಾಲತಾಣಗಳಲ್ಲಿ ವಿಮರ್ಶೆಯೊಂದಿಗೆ ಹಂಚಿಕೊಳ್ಳುವೆ. 'ದೀವಟಿಗೆ' ಎನ್ನುವ ಕವನ ಸಂಕಲವನ್ನೂ ರಚಿಸಿರುವೆ. ಅದು 'ಕನ್ನಡ ಪುಸ್ತಕ ಪ್ರಾಧಿಕಾರ'ದಿಂದ ಸಹಾಯಧನ ಪಡೆದುಕೊಂಡಿದೆ.

ಅಂಗಡಿಯಲ್ಲಿ ಜಾಗದ ಕೊರತೆಯಿಂದ ಪುಸ್ತಕಗಳನ್ನು ಮನೆಯಲ್ಲಿ ಸಂಗ್ರಹಿಸಿದ್ದೇನೆ. ಅಗತ್ಯವಿದ್ದವರು ಪ್ರತಿ ಭಾನುವಾರ ಮನೆಗೆ ಬಂದು ಪುಸ್ತಕ ತೆಗೆದುಕೊಂಡು ಹೋಗುತ್ತಾರೆ. ಅವನ್ನು ಹಿಂದಿರುಗಿಸುವಾಗ ಕೈಲಿದ್ದಷ್ಟು ಹಣ ನೀಡಿ ಹೋಗುತ್ತಾರೆ. ಭಾನುವಾರ ಹೊರತಾಗಿ ಮಿಕ್ಕ ದಿನಗಳಲ್ಲಿ ಗೂಡಂಗಡಿ ವ್ಯಾಪಾರದೊಂದಿಗೆ ಬದುಕು ಸಾಗಿಸುತ್ತಿದ್ದೇನೆ.

ಬೆನ್ನುಹುರಿ ಸಮಸ್ಯೆಗೆ ತುತ್ತಾದ ನಂತರ ಒಬ್ಬನೇ ಇದ್ದಾಗ ಪುಸ್ತಕ ಓದುವ ಮನಸಾಯಿತು. ನಂತರ ಅದು ಹವ್ಯಾಸವಾಗಿ ರೂಪುಗೊಂಡಿತು. ಸಾಕಷ್ಟು ಪುಸ್ತಕಗಳನ್ನು ಸಂಗ್ರಹಿಸಿದ್ದೇನೆ. ಭೇಟಿಯಾಗಲು ಬರುತ್ತಿದ್ದ ಕೆಲವರು ಪುಸ್ತಕಗಳನ್ನು ತಂದುಕೊಟ್ಟರು. ನಂತರ ಬೇರೆ ಬೇರೆ ಪುಸ್ತಕಗಳನ್ನು ಸಂಗ್ರಹಿಸಲು ಮುಂದಾದೆ. ನನ್ನಲ್ಲಿರುವ ಪುಸ್ತಕಗಳ ಅಗತ್ಯವಿದ್ದವರು ಬಂದು ತೆಗೆದುಕೊಂಡು ಹೋಗುತ್ತಾರೆ.

## ಸಂಕಟ ಹೆಚ್ಚಿಸಿದ ಕೊರೊನಾ

ಜಾಗತಿಕವಾಗಿ ಬಾಧಿಸಿದ ಕೊರೊನಾ ನನ್ನನ್ನು ಹೇಗೆ ತಾನೇ ಬಿಟ್ಟೀತು? ಮೊದಲೇ ಆರ್ಥಿಕವಾಗಿ ತೊಂದರೆ ಎದುರಿಸುತ್ತಿದ್ದ ನನಗೆ ಇನ್ನಷ್ಟು ಸಂಕಟ ತಂದೊಟ್ಟಿತು. ಗೂಡಂಗಡಿಗೆ ಬೀಗ ಬಿದ್ದಿತ್ತು.

ಇಷ್ಟೆಲ್ಲದರ ಜೊತೆಗೆ ಆರೋಗ್ಯ ಸಮಸ್ಯೆ ಬೇರೆ. ಲಾಕ್‌ಡೌನ್‌ಗೂ ಮುಂಚೆ 'ಬ್ರದರ್ಸ್' ಬಂದು ಯೂರಿನ್ ಪೈಪ್ ಬದಲಾಯಿಸುತ್ತಿದ್ದರು. ಆದರೆ ಲಾಕ್‌ಡೌನ್ ವೇಳೆ ಅವರು ಬರಲಾಗಲಿಲ್ಲ. ನಾನೇ ಆಸ್ಪತ್ರೆಗೆ ಹೋಗೋಣ ಎಂದರೆ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ದೊರೆಯುತ್ತಿರಲಿಲ್ಲ. ಸಿಕ್ಕಾಪಟ್ಟೆ ತೊಂದರೆ ಅನುಭವಿಸಿದೆ. ಹಣವಿಲ್ಲದ್ದಕ್ಕೆ ವೈದ್ಯರು ಸೂಚಿಸಿದ ಮಾತ್ರೆಗಳಿಗಿಂತ ಕಡಿಮೆ ತೆಗೆದುಕೊಳ್ಳುವಂತಾಯಿತು.

## ಸಾಹಿತ್ಯ ರಚನೆಯೇ ಬೆಳಕು

ನನ್ನ 'ದೀವಟಿಗೆ' ಕೃತಿ ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿದೆ. ಜೊತೆಗೆ ಬೇರೆ ಪುಸ್ತಕ ಬರೆಯುವ ಯೋಚನೆಯೂ ಇದೆ. ತಯಾರಿಯೂ ನಡೆದಿದೆ. ಟಿಪ್ಪಣಿಗಳನ್ನು ಮೊಬೈಲ್‌ನಲ್ಲಿ ಬರೆದಿಟ್ಟಿರುವೆ. ಸಣ್ಣ ಮಟ್ಟದ ಸಾಹಿತಿಯಾಗುವ ಆಸೆ ಇದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನನ್ನದು ಪುಟ್ಟ ಹೆಜ್ಜೆ. ನಮ್ಮ ಭಾಗದಲ್ಲಿ ಎಲ್ಲರಿಗೂ ಅನುಕೂಲವಾಗುವಂತಹ ಗ್ರಂಥಾಲಯವೊಂದನ್ನು ಶುರು ಮಾಡಬೇಕೆಂದಿರುವೆ.

ಎಸ್.ಆರ್. ನಾರಾಯಣ ಅವರ
**ಸಂಪರ್ಕ: 9731489521**

ಪ್ರತಿಕ್ರಿಯಿಸಿ: feedback@sudha.co.in